ಅ.ದಾ. 32/2022 ಡಿಡಬ್ಲ್ಯೂ-1

ದಿನಾಂಕಃ 16.10.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದ:**

1 ನೇ ವಾದಿಯು ನನ್ನ ಚಿಕ್ಕಪ್ಪನ ಮಗ. ನಾವು ನಮ್ಮ ತಂದೆಗೆ 9 ಜನ ಮಕ್ಕಳು. ವಾದಿಯವರಿಗೆ ಎಷ್ಟು ಮಕ್ಕಳು ಎಂದು ನನಗೆ ತಿಳಿದಿರುವುದಿಲ್ಲ. ದಾವಾ ಸ್ವತ್ತುಗಳು ನಮ್ಮ ವಾದಿಯವರು ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ದಾವಾ ಸ್ವತ್ತುಗಳ ಮೇಲೆ ನಮಗೆ ಎಷ್ಟು ಹಕ್ಕು ಇರುತ್ತದೋ, ಅಷ್ಟೇ ಹಕ್ಕು ವಾದಿಯವರಿಗೂ ಇರುತ್ತದೆ ಎಂದರೆ ಸರಿ. 1 ನೇ ವಾದಿಯವರು ನನ್ನ ವಿರುದ್ಧ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 23/2013 ರ ಅಡಿಯಲ್ಲಿ ವಿಭಾಗವನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿಯವರಿಗೆ ಸಮಾನವಾದ ಹಕ್ಕು ಇರುತ್ತದೆ ಎಂದು ಆದೇಶವಾಗಿರುತ್ತದೆ ಎಂದರೆ ಸರಿ. ಸದರಿ ಆದೇಶದ ಬಾಬ್ತು ವಾದಿಯವರು FDP.3/2017 ರ ಅಡಿಯಲ್ಲಿ ಅಂತಿಮ ಆದೇಶವನ್ನು ಜಾರಿ ಮಾಡಿ ಕೊಡುವಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. FDP.3/2017 ರ ಅಡಿಯಲ್ಲಿ ಸರ್ವೇ ಕಾರ್ಯ ಪೂರ್ಣಗೊಂಡಿರುತ್ತದೆ ಎಂದರೆ ಸರಿ. ಅಸಲು ದಾವಾ 21/2013 ರಲ್ಲಿ ನಮಗೂ ಹಕ್ಕು ಇದೆ ಎಂದು ನಾವು ತಕರಾರನ್ನು ಸಲ್ಲಿಸಿರುತ್ತೇವೆ. ನಾವು ದಾವಾ ಸ್ವತ್ತುಗಳನ್ನು ಮಾರಾಟ ಮಾಡಲು ಮುಂದಾಗಿರುವುದಿಲ್ಲ.

ಅದಕ್ಕೆ ಸಂಬಂಧಿಸಿದಂತೆ ಸ್ವ ಪ್ರಮಾಣ ಪತ್ರವನ್ನು ಸಲ್ಲಿಸಲು ನನಗೆ ಯಾವುದೇ ತಕರಾರು ಇರುವುದಿಲ್ಲ. FDP.3/2017 ರ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ಅರ್ಜಿಯು ಯಾವ ಹಂತದಲ್ಲಿ ಇರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿಯೂ ಸಹಾ ನಾವು ದಾವಾ ಸ್ವತ್ತುಗಳನ್ನು ನಾವು ಮಾರಾಟ ಮಾಡುವುದಿಲ್ಲ ಎಂದು ಯಾವುದೇ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ. ನಾವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆದೇಶವನ್ನು ಪಡೆದುಕೊಂಡು ದಾವಾ ಸ್ವತ್ತುಗಳನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯಲ್ಲಿ ದಾವಾ ಸ್ವತ್ತುಗಳನ್ನು ಮಾರಾಟ ಮಾಡುವಂತೆ ತಡೆಯಾಜ್ಞೆ ತಂದಲ್ಲಿ ನನಗೆ ಯಾವುದೇ ಸಮಸ್ಯೆ ಇರುವುದಿಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.